■ ವಿಶಾಖ ಎನ್.

# ಪರಿಣೀತಿ ಹಾಡಿನ ಪರಿಣತಿ



ಪರಿಣೀತಿ ಚೋಪ್ರ ಮೊನ್ನೆ ಹೈ ವೋಲ್ಟೇಜ್ ನಗು ತುಳುಕಿಸುತ್ತಿದ್ದರು. ಬದುಕಿನಲ್ಲಿ ಬಹುಕಾಲದಿಂದ ಕಂಡಿದ್ದ ಕನಸೊಂದು ನನಸಾದ ಖುಷಿಯಲ್ಲಿ ಅವರಿದ್ದರು. ಬಾಲ್ಯದಲ್ಲಿ ಗೀತ ಗಾಯನ ಸ್ಪರ್ಧೆಗಳಿಗೆ ಹೋಗುವುದು ಅವರಿಗೆ ಹವ್ಯಾಸವಾಗಿತ್ತು. ಮುಂದೆ ಒಂದು ದಿನ ದೊಡ್ಡ ಗಾಯಕಿಯಾಗಿ ಹೆಸರು ಮಾಡಬೇಕು ಎಂಬ ಬಯಕೆ. ಆದರೆ, ಅವರು ಆಗಿದ್ದು ನಟಿ. ಈಗ ಎರಡನೇ ಇನಿಂಗ್ಸ್‌ನಲ್ಲಿ ಅವರು ಕಾರ್ಯಕ್ರಮ ಕೊಡುವ ಮಟ್ಟದ ಗಾಯಕಿ ಆಗಿದ್ದಾರೆ. ಆ ಮೂಲಕ ಬಾಲ್ಯದ ಕನಸು ನನಸಾಗಿದೆ. ಮುಂಬೈನ ಸಂಗೀತೋತ್ಸವದಲ್ಲಿ ಪರಿಣೀತಿ ಕೂಡ ಕಛೇರಿ ನಡೆಸಿಕೊಟ್ಟಿದ್ದು ಇತ್ತೀಚೆಗೆ ಸುದ್ದಿ ಆಯಿತು.

ಪತಿ ರಾಘವ್ ಚಡ್ಡಾ ಪಾತ್ರವೂ ಇದರಲ್ಲಿ ಇದೆ. ನಿನಗೆ ಏನು ಇಷ್ಟವೋ ಅದನ್ನು ಮಾಡು ಎಂದು ಅವರೇ ಪರಿಣೀತಿಗೆ ಹುರಿದುಂಬಿಸಿದ್ದು. ಅದರಿಂದಲೇ ತಾವು ವೇದಿಕೆ ಹತ್ತುವುದು ಸಾಧ್ಯವಾಯಿತು ಎಂದು ಅವರು ಹೆಮ್ಮೆಯಿಂದ ಹೇಳಿಕೊಂಡರು.

ಪರಿಣೀತಿ ತಮ್ಮ ಮದುವೆಯ ಸಂದರ್ಭದಲ್ಲಿಯೇ ಒಂದು ಗೀತೆಯನ್ನು ರೆಕಾರ್ಡ್ ಮಾಡಿದ್ದರು. ಅದಾಗಲೇ ರಾಘವ್ ಚಡ್ಡಾ ಅವರಿಗೆ ತಮ್ಮ ಬಾಳಸಂಗಾತಿಯ ಮಹತ್ವಾಕಾಂಕ್ಷೆ ಏನು ಎನ್ನುವುದು ಅರಿವಾಗಿತ್ತು.

ಯಶ್‌ರಾಜ್ ಬ್ಯಾನರ್‌ನ ಸಿನಿಮಾಗಳಿಗೆ ಬೇಕಾದ ಪೋಷಕಪಾತ್ರಗಳ ಆಯ್ಕೆ ನಡೆಸುವ ಕಾಸ್ಟಿಂಗ್ ಡೈರೆಕ್ಟರ್ ಆಗಿ ಪರಿಣೀತಿ ಮೊದಲು ಕೆಲಸ ಪ್ರಾರಂಭಿಸಿದ್ದು. ಆಮೇಲೆ ಅಲ್ಲಿ ಅವರ ಚುರುಕುತನ ಕಂಡು ನಟಿಯಾಗಿ ಅವರಿಗೆ ಅವಕಾಶ ಒದಗಿಬಂತು. ಹೆಚ್ಚು ಗ್ಲಾಮರಸ್ ಅಲ್ಲದ ಪರಿಣೀತಿ ದೇಸಿ ಕಚ್ಚಾ ಪಾತ್ರಗಳಲ್ಲಿ ಪ್ರೇಕ್ಷಕರನ್ನು ಹಿಡಿದಿಡಬಲ್ಲರು ಎಂದೇ ಅವರಿಗೆ ಅವಕಾಶಗಳು ಸಿಕ್ಕಿದ್ದು.

ಇತ್ತೀಚೆಗೆ ಸಿನಿಮಾಗಳಲ್ಲಿ ಅವರು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿಲ್ಲ. ಆದರೆ, ಗಾಯಕಿಯಾಗಿ ಒಂದೊಂದೇ ಹೆಜ್ಜೆ ಮುಂದಿಡುತ್ತಿರುವುದು ಇನ್ನೊಂದು ಇನಿಂಗ್ಸ್ ಆಗಿದೆ.

‘ಕೇಸರಿ’ ಸಿನಿಮಾದಲ್ಲಿ ಹಾಡಿದ ‘ಮಿಟ್ಟಿ’ ಹಾಡು ಅನೇಕ ಪ್ರೇಕ್ಷಕರನ್ನು ಹಿಡಿದಿಟ್ಟಿತು. ಅವರ ಕಂಠದಲ್ಲಿ ‘ಪರೇಶಾನ್’ ಹಾಡನ್ನು ಕೇಳಿ ಇಷ್ಟಪಟ್ಟವರೂ ಇದ್ದಾರೆ. ಕಛೇರಿಯ ಅನುಭವ ದಕ್ಕಿಸಿಕೊಂಡ ನಂತರ ಅವರು ಒಂದು ಸಿಂಗಲ್ ಆಲ್ಬಂ ಹೊರತರುವ ಯೋಚನೆಯನ್ನು ಮಾಡಿದ್ದಾರೆ. ‘ಮಾನಾ ಕೆ ಹಮ್ ಯಾರ್ ನಹೀ’ ಎಂಬ ‘ಮೇರಿ ಪ್ಯಾರಿ ಬಿಂದು’ ಸಿನಿಮಾ ಗೀತೆಯಿಂದ ಹಿನ್ನೆಲೆ ಗಾಯಕಿಯಾದ ಪರಿಣೀತಿ ಈಗ ಅರಿಜಿತ್ ಸಿಂಗ್, ಬಾದ್‌ಶಾ ತರಹದ ಗಾಯಕರ ಜೊತೆ ಒಪ್ಪಂದ ಮಾಡಿಕೊಂಡಿರುವ ನಿರ್ವಹಣಾ ಸಂಸ್ಥೆಯ ಜೊತೆಗೂ ಕೈಜೋಡಿಸಿದ್ದಾರೆ. ವೃತ್ತಿಪರ ರೀತಿಯಲ್ಲಿಯೇ ಅವರು ಗಾಯನದ ಇನಿಂಗ್ಸ್ ಅನ್ನೂ ಪ್ರಾರಂಭಿಸಿದ್ದಾರೆನ್ನುವುದನ್ನು ಇದು ಸ್ಪಷ್ಟಪಡಿಸುತ್ತದೆ. ■



# ಹೊಸ ವೆಬ್ ಸರಣಿಯಲ್ಲಿ ಸಮಂತಾ

‘ಮಯೋಸಿಟಿಸ್’ ಎಂಬ ರೋಗನಿರೋಧಕ ಶಕ್ತಿಯ ಸಮಸ್ಯೆಗೆ ಚಿಕಿತ್ಸೆ ಪಡೆದಿದ್ದ ನಟಿ ಸಮಂತಾ ದೀರ್ಘ ಕಾಲದ ನಂತರ ಹೊಸ ಪ್ರಾಜೆಕ್ಟ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ‘ಸಿಟಾಡೆಲ್’ ಎಂಬ ವೆಬ್ ಸರಣಿಯಲ್ಲಿ ಅವರು ನಟಿಸುವುದು ಪಕ್ಕಾ ಆಗಿದ್ದು, ಅವರೇ ಈ ವಿಷಯವನ್ನು ಅಧಿಕೃತವಾಗಿ ಹೇಳಿಕೊಂಡರು. ‘ದಿ ಫ್ಯಾಮಿಲಿ ಮ್ಯಾನ್’ ವೆಬ್ ಸರಣಿಯಲ್ಲಿ ಸಮಂತಾ ಪಾತ್ರಕ್ಕೆ ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿತ್ತು. ಆ ಸರಣಿ ನಿರ್ದೇಶಿಸಿದ್ದ ರಾಜ್ ಹಾಗೂ ಡಿ.ಕೆ. ಈ ಸರಣಿಯನ್ನೂ ನಿರ್ದೇಶನ ಮಾಡಲಿದ್ದಾರೆ. ಹಿಂದಿ ಭಾಷಿಗರಿಗೂ ಸಮಂತಾ ಕಾಲಕ್ರಮೇಣ ಗುರುತಾಗಿದ್ದಾರೆ ಎನ್ನುವುದಕ್ಕೆ ಇದೇ ಸಾಕ್ಷಿ.

ವಿಜಯದೇವರಕೊಂಡ ಜೊತೆಯಲ್ಲಿ ‘ಖುಷಿ’ ತೆಲುಗು ಸಿನಿಮಾದಲ್ಲಿ ಅಭಿನಯಿಸಿದ ನಂತರ ಸಮಂತಾ ಚಿಕಿತ್ಸೆ ಪಡೆಯುವುದರಲ್ಲಿಯೇ ನಿರತರಾಗಿದ್ದರು. ಈಗ ಮತ್ತೆ ಬಣ್ಣ ಹಚ್ಚುವ ಸಮಯ ಬಂದಂತಾಗಿದೆ. ಅಮೆರಿಕನ್ ಸ್ಪೈ ಆ್ಯಕ್ಷನ್ ಸ್ಟೋರಿಯನ್ನು ‘ಸಿಟಾಡೆಲ್’ ಒಳಗೊಂಡಿದ್ದು, ಹೊಸ ತಲೆಮಾರಿನ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ನಿರೀಕ್ಷೆ ಇದೆ. ನಟ ವರುಣ್ ಧವನ್, ರಾಜ್, ಡಿ.ಕೆ ಹಾಗೂ ಸೀತಾ ಆರ್. ಮೆನನ್ ಜೊತೆಗೆ ತಾವೂ ಇರುವ ಫೋಟೊವನ್ನು ಸಮಂತಾ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ. ■